It is Amma who inspired me to undertake the initiative of building supercomputers. Amma not only emphasizes the importance of the Intelligence Quotient (IQ), but the Emotional Quotient (EQ) and Spiritual Quotient (SQ) as well. Thus she creates a balance between scientific, spiritual and cultural education. Amma has revived the language of love and compassion.

**- Dr. Vijay Bhatkar**

Architect of India's National Initiative in Supercomputing

'ಅಮೃತ ಕುಟೀರ'ಗಳು. 59 ಸಾವಿರ ಅಬಲೆಯರಿಗೆ ಅಂಗವಿಕಲರಿಗೆ ವೃದ್ಧರಿಗೆ 'ಅಮೃತ ನಿಧಿ' ಮಾಸಿಕ ಪಿಂಚಣಿ. 41 ಸಾವಿರ ಬಡ ವಿದ್ಯಾರ್ಥಿಗಳಿಗೆ 'ವಿದ್ಯಾಮೃತ' ಸ್ಕಾಲರ್‌ಶಿಪ್. 1600 ಸ್ಲಮ್ ನಿವಾಸಿ ಕುಟುಂಬಗಳಿಗೆ ಉತ್ತಮ ಪುನರ್ವಸತಿ. ಪ್ರತಿವರ್ಷ 10 ಕೋಟಿ ಬಡವರಿಗೆ ಅನ್ನದಾನ. ಒಂದು ಲಕ್ಷ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ. ಇತ್ಯಾದಿ.

ಮಠವು ಮೈಸೂರು ಒಳಗೊಂಡು ಕೇರಳ ಹಾಗೂ ಅಂಡಮಾನ್‌ನಲ್ಲಿ 'ಅಮೃತ ಕೃಪಾ' ಆಸ್ಪತ್ರೆಗಳನ್ನು ಮತ್ತು ಕೊಚ್ಚಿಯಲ್ಲಿ 1300 ಹಾಸಿಗೆಗಳ 'ಅಮೃತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ'ಯನ್ನು ನಡೆಸುತ್ತಿದೆ. ಬೆಂಗಳೂರು ಮತ್ತು ದೆಹಲಿಯಲ್ಲಿ 'ಅಮೃತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ'ಗಳು ನಿರ್ಮಾಣದ ಹಂತದಲ್ಲಿವೆ. ದೇಶಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಅಗಣಿತ ಶಿಬಿರಗಳನ್ನು ನಡೆಸಿ, ವೈದ್ಯಕೀಯ ನೆರವನ್ನು ಜನರಿಗೆ ತಲುಪಿಸುತ್ತಲಿದೆ. ಇದುವರೆಗೆ 26 ಲಕ್ಷ ಜನರಿಗೆ ಓಪನ್‌ಹಾರ್ಟ್ ಸರ್ಜರಿ, ಕಿಡ್ನಿ ಟ್ರಾನ್ಸ್‌ಪ್ಲಾಂಟ್, ನ್ಯೂರೋ ಹಾಗೂ ಆಂಕೋ ಸರ್ಜರಿ ಒಳಗೊಂಡ ಅತ್ಯಾಧುನಿಕ ಚಿಕಿತ್ಸೆಯನ್ನು ಉಚಿತವಾಗಿ ನೀಡಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿ, ಉತ್ತಮ ಶಿಕ್ಷಣಕ್ಕೆ ಹೆಸರಾದ 60ಕ್ಕೂ ಹೆಚ್ಚು 'ಅಮೃತ ವಿದ್ಯಾಲಯಂ' ಶಾಲೆಗಳು ದೇಶಾದ್ಯಂತ ನಡೆದಿವೆ.

'ಅಮೃತ ವಿಶ್ವವಿದ್ಯಾಪೀಠ' ಮತ್ತು ಅದರ ಅಂಗಗಳಾದ 'ಲಿವ್‌ಇನ್ ಲ್ಯಾಬ್'ಗಳು ಕರ್ನಾಟಕದ ಮೈಸೂರು, ಬೆಂಗಳೂರು ಒಳಗೊಂಡು ಮೂರು ರಾಜ್ಯಗಳ ಐದು ಕ್ಯಾಂಪಸ್ಸುಗಳಲ್ಲಿ ನಡೆದಿದ್ದು, ಇವುಗಳಲ್ಲಿ ಜನಸಾಮಾನ್ಯರ ನಿತ್ಯಜೀವನದ ಉತ್ತಮಿಕೆಗಾಗಿ ಬಯೋಟೆಕ್ನಾಲಜಿ, ಎಂಜಿನೀರಿಂಗ್, ಮ್ಯಾನೇಜ್ಮೆಂಟ್, ಕಮ್ಯೂನಿಕೇಷನ್, ಶಿಕ್ಷಣ, ಆಯುರ್ವೇದ, ಅಲೋಪತಿ ಮುಂತಾದ ವಿಭಾಗಗಳಲ್ಲಿ, ವಿಶ್ವಸಂಸ್ಥೆ ಹಾಗೂ ಅನೇಕ ವಿದೇಶೀ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಸಮಾಜಮುಖಿಯಾದ ಸಂಶೋಧನೆಗಳು ನಡೆದಿವೆ. ಮಠವು ದತ್ತು ಪಡೆದಿರುವ ಭಾರತದ 101 ಗ್ರಾಮಗಳ ಅಭಿವೃದ್ಧಿ ಯೋಜನೆಗಳಲ್ಲಿ ವಿದ್ಯಾರ್ಥಿಗಳನ್ನು ಒಳಗೊಳ್ಳಲಾಗಿದೆ; ಇದು ಯುವಜನರಲ್ಲಿ ಸೇವಾಮನೋಭಾವವನ್ನು ಮೂಡಿಸುವ ಪ್ರಯತ್ನವಾಗಿದೆ. ಪ್ರಾಕೃತಿಕ ದುರಂತ ನಡೆದ ಸ್ಥಳಗಳಿಗೆ ತ್ವರಿತ, ತಾತ್ಕಾಲಿಕ ಹಾಗೂ ದೀರ್ಘಕಾಲೀನ ಸೇವಾಕಾರ್ಯಗಳನ್ನು ತಲುಪಿಸುವುದಲ್ಲದೆ, ವಿಶ್ವವಿದ್ಯಾಪೀಠವು ಭೂಕಂಪ, ಭೂಕುಸಿತ, ಸಮುದ್ರದ ಹವಾಮಾನದ ಸ್ಥಿತಿಗತಿ, ಮುಂತಾದ ಕ್ಷೇತ್ರಗಳಲ್ಲಿ ದುರಂತದ ಮುನ್ಸೂಚನೆ ಪಡೆಯುವ ದಿಕ್ಕಿನಲ್ಲಿ ಸಂಶೋಧನೆಗಳನ್ನೂ ಅಮ್ಮನ ಮಾರ್ಗದರ್ಶನದಲ್ಲಿ ನಡೆಸಿದೆ.

ಪ್ರಕೃತಿ ವಿಕೋಪ ದುರಂತಗಳು ಸಂಭವಿಸಿದಾಗ ಮಠವು ಪರಿಹಾರಕಾರ್ಯಗಳನ್ನು ಕೈಗೊಳ್ಳುತ್ತಿದೆ. 2001ರಲ್ಲಿ ಗುಜರಾತಿನಲ್ಲಿ 1200 ಮನೆಗಳನ್ನು ಕಟ್ಟಿ ಭೂಕಂಪಗ್ರಸ್ತ ಮೂರು ಊರುಗಳನ್ನು ಪುನರ್ನಿರ್ಮಾಣ ಮಾಡಿಕೊಟ್ಟಿದೆ. 2004ರಲ್ಲಿ ಸುನಾಮಿ ಬಂದೆರಗಿ ದಕ್ಷಿಣ ಭಾರತದ ತೀರಪ್ರದೇಶಗಳಲ್ಲಿ ಅಪಾರ ಸಾವು-ನೋವು ಸಂಭವಿಸಿದಾಗ, ಮಠವು ಬೃಹತ್ ಪ್ರಮಾಣದಲ್ಲಿ ಪುನರ್ನಿರ್ಮಾಣ ಕೈಗೊಂಡಿದೆ. 2009ರಲ್ಲಿ ರಾಯಚೂರಿನಲ್ಲಿ ನೆರೆ ಬಂದಾಗ 1000 ಮನೆಗಳನ್ನು ನಿರ್ಮಿಸಿ ನಾಲ್ಕು ಗ್ರಾಮಗಳ ಜನರಿಗೆ ಪುನರ್ವಸತಿ ಕಲ್ಪಿಸಿದೆ. ಮೇಘಸ್ಫೋಟ, ಭಾರೀಮಳೆ, ಭೂಕುಸಿತಗಳಿಂದ ಜರ್ಜರಿತವಾದ ಉತ್ತರಾಖಂಡ್, ಕಾಶ್ಮೀರ ಮತ್ತು ನೇಪಾಳಕ್ಕೆ ಸುಸಜ್ಜಿತ ಆಂಬ್ಯುಲೆನ್ಸ್, ವೈದ್ಯರು, ಔಷಧ ಸಾಮಗ್ರಿ, ಪಾರಾಮೆಡಿಕ್ಸ್ ಮತ್ತು ಸೇವಾವ್ರತಿಗಳ ಮೂಲಕ ತ್ವರಿತ ವೈದ್ಯಕೀಯ ಸಹಾಯವನ್ನು ಕಳಿಸಿ, ಹಿಂದೆಯೇ ಆಹಾರ, ಬಟ್ಟೆ ಮುಂತಾದ ಅವಶ್ಯಕತೆಗಳನ್ನು ಪೂರೈಸಿದೆ. ಕಾಲಕ್ರಮೇಣ ಗೃಹನಿರ್ಮಾಣ ಮೊದಲುಗೊಂಡು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಅಮೆರಿಕಾದಲ್ಲಿ 2005ರಲ್ಲಿ ಚಂಡಮಾರುತ ಬಡಿದಾಗ ಮತ್ತು ಜಪಾನ್‌ನಲ್ಲಿ 2011 ಸುನಾಮಿ ಬಡಿದಾಗ ಆಯಾ ದೇಶಗಳ ದುರಂತ ಪರಿಹಾರ ನಿಧಿಗೆ ತಲಾ ಒಂದು ಮಿಲಿಯನ್ ಡಾಲರ್ ಸಹಾಯಧನವನ್ನು ಮಠವು ನೀಡಿತು. ಇತ್ತೀಚೆಗೆ ಕೇಂದ್ರ ಸರ್ಕಾರದ 'ನಮಾಮಿ ಗಂಗೆ' ಯೋಜನೆಗೆ ಮಠವು 100 ಕೋಟಿ ರುಪಾಯಿ ಧನಸಹಾಯ ನೀಡಿತು.

ಹೀಗೆ ಇಂದು ಜಗತ್ತಿನಾದ್ಯಂತ ನಡೆದಿರುವ ಸೇವಾಯೋಜನೆಗಳೆಲ್ಲವೂ ಜನತೆಗೆ ಸ್ಪಂದಿಸಿದ ಅಮ್ಮನ ಕರುಣಾಪೂರಿತ ಪರಿಹಾರರೂಪಗಳಾಗಿವೆ; ಅಮ್ಮ ನೀಡುವ ಪ್ರೇಮಸ್ಪರ್ಶದಿಂದ ಆಂತರಿಕ ಪರಿವರ್ತನೆ ಹೊಂದಿದ ಧನ್ಯರ ನಿಸ್ವಾರ್ಥ ಸೇವೆಯ ಪುಷ್ಪಗಳಾಗಿವೆ. ವಿಶೇಷತೆಯೆಂದರೆ ಅಮ್ಮ ತಾವು ಕುಳಿತುಕೊಂಡು ಇತರರಿಗೆ ಕೆಲಸ ಹೇಳುವುದಿಲ್ಲ, ಬದಲಿಗೆ ಸ್ವತಃ ಕೆಲಸಕ್ಕೆ ಇಳಿದು ಮಾದರಿಯಾಗುತ್ತಾರೆ.

ಇದನ್ನು ಮನಗಂಡ ಮಹಾನ್ ಜನನಾಯಕ ಹಾಗೂ ಅಮೆರಿಕಾದ ಅಧ್ಯಕ್ಷ ರೆವ್. ಮಾರ್ಟಿನ್ ಲೂಥರ್ ಕಿಂಗ್ ಅವರ ಮೊಮ್ಮಗಳು, ಮಿಸ್ ಯೋಲಾಂಡಾ ಕಿಂಗ್ ಅವರು," "What I cherish about Amma is that she not only talks the talk and is the embodiment of unconditional love, but She expresses that love in action. She walks the talk. Mahatma Gandhi urged us to 'be the change we wish to see in the world.' Amma is the change she wants to see in our world. She is a profound living example for all of us." ಎಂದಿದ್ದಾರೆ.

'ದೇವರು ಎಂದರೆ, ಆಕಾಶದಲ್ಲ ಎಲ್ಲೋ ಕುಳಿತು ನಾವು ಮಾಡುವ ತಪ್ಪುನೆಪ್ಪುಗಳ ಲೆಕ್ಕ ಇಡುವವನಲ್ಲ; ಅವನು ಸಚರಾಚರಗಳಲ್ಲ ನೆಲೆಸಿದ್ದಾನೆ'

### ಅಮ್ಮನ ದರ್ಶನ ವಿಶೇಷ

ಅಮ್ಮ ಪ್ರತಿಯೊಂದು ದಿನವನ್ನೂ ಜನತೆಯ ಸೇವೆಗಾಗಿ ಮುಡಿಪಾಗಿಟ್ಟಿದ್ದಾರೆ. ಮಕ್ಕಳ ಅಳಲನ್ನು ಆಲಿಸಲೆಂದೇ ಯಾತ್ರೆ ಮಾಡುತ್ತಾ ಹೆಚ್ಚು ಹೆಚ್ಚು ಜನರಿಗೆ ತಮ್ಮನ್ನು ಲಭ್ಯವಾಗಿಸಿಕೊಳ್ಳುತ್ತಿದ್ದಾರೆ. ಜಗತ್ತಿನ

